
ಕರ್ನಾಟಕ ಸರ್ಕಾರ
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ ಚಿಕ್ಕಮಗಳೂರು,
2021-22
ಪರ್ಯಾಯ ಶೈಕ್ಷಣಿಕ ಯೋಜನೆ
ವಿಷಯ:- ಕನ್ನಡ
ತರಗತಿ:-7ನೇ ತರಗತಿ
ರಚನೆಗೆ ಸಹಕಾರ:- ನ.ರಾ.ಪುರ. ಶೈಕ್ಷಣಿಕ ವಲಯ
ಪರಿಕಲ್ಪನೆ ಮತ್ತು ಮಾರ್ಗದರ್ಶನ
ಪ್ರಾಂಶುಪಾಲರು
ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆ
ರಾಮನಹಳ್ಳಿ, ಚಿಕ್ಕಮಗಳೂರು

## ಪರಿವಿಡಿ


| ಕ್ರ. ಸಂ. | ಅಧ್ಯಾಯಗಳು | ಪುಟ ಸಂಖ್ಯೆ |
|---|---|---|
| 01. | ಪುಟ್ಟಜ್ಜಿ ಪುಟ್ಟಜ್ಜಿ ಕಥೆ ಹೇಳು | 3–5 |
| 02. | ಸೀನ ಸೆಟ್ಟರು ನಮ್ಮ ಟೀಚರು | 6–8 |
| 03. | ಅನ್ನದ ಹಂಗು ಅನ್ಯರ ಸ್ವತ್ತು | 9–11 |
| 04. | ಪರಿಸರ ಸಮತೋಲನ | 12–14 |
| 05. | ಪದ್ಯ : ಗಿಡಮರ | 15–17 |
| 06. | ಪದ್ಯ : ಸ್ವತಂತ್ರ್ಯ ಸ್ವರ್ಗ | |


DIET CHIKMAGALURE

**ತರಗತಿ :7** **ಅಭ್ಯಾಸದ ಹಾಳೆ–1 ಕಲಿಕಾಂಶ ಚಟುವಟಿಕೆ** **ವಿಷಯ: ಕನ್ನಡ**

**ಘಟಕ: 1. ಪುಟ್ಟಜ್ಜಿ ಪುಟ್ಟಜ್ಜಿ ಕಥೆ ಹೇಳು**

**ಸೂಚನೆಗಳು:**
* ಪಠ್ಯಪುಸ್ತಕದಲ್ಲಿರುವ ಪಠ್ಯಭಾಗವನ್ನು ಸ್ಪಷ್ಟವಾಗಿ ಓದುವುದು.
* ಹೊಸ ಪದಗಳ ಅರ್ಥವನ್ನು ಅರ್ಥೈಸಿಕೊಳ್ಳುವುದು.
* ಮಗು ಪೋಷಕರೊಂದಿಗೆ ಗದ್ಯದ ಸಂಭಾಷಣೆ ನಡೆಸಿ ನಾಟಕ/ ಕಥಾರೂಪದಲ್ಲಿ ಹೇಳುವುದು.
* ನೀರಿನ ಸಂರಕ್ಷಣೆ ಕುರಿತು ಚಿಕ್ಕ ಪ್ರಬಂಧ ಬರೆಯುವುದು.
* ಪಠ್ಯದಲ್ಲಿರುವ ವ್ಯಾಕರಣ ಮಾಹಿತಿ ಪರಿಚಯ ಮಾಡಿಕೊಳ್ಳುವುದು.
* ಸಂವೇದದ ಯೂಟ್ಯೂಬ್ ಕ್ಯೂ.ಆರ್. ಕೋಡ್ ಬಳಸಿ ಈ ಗದ್ಯಭಾಗದ ಸಾರಾಂಶವನ್ನು ಅರ್ಥೈಸಿಕೊಳ್ಳುವುದು.

**ಪದಗಳ ಅರ್ಥ ಓದಿ ಬರೆ.**

* ಹಾಡ್ಗತೆ–ಹಾಡು ಸೇರಿರುವ ಕಥೆ * ತರಾವರಿ–ವಿಧವಿಧವಾದ * ಭೀತಿ–ಭಯ * ಸಾಂತ್ವನ– ಸಮಾಧಾನ, ಸಂತೈಸುವಿಕೆಯ ನುಡಿ * ಮದ್ದು–ಔಷಧ * ಮಾಗು–ಒಣಗು, ವಾಸಿಯಾಗು * ಸಂಭ್ರಮ–ಉತ್ಸಾಹ, ಸಡಗರ * ಆಶ್ರಯ–ಆಸರೆ, ಸಹಾಯ, ರಕ್ಷಣೆ

**ವ್ಯಾಕರಣಾಂಶ : ಓದಿ ಬರೆಯಿರಿ**

*** ಏಕವಚನ :**

| ಪುಲ್ಲಿಂಗ | ಸ್ತ್ರೀಲಿಂಗ | ನಪುಂಸಕಲಿಂಗ |
|---|---|---|
| ನಾನು – | ನಾನು – | ಅದು – |
| ಇವನು – | ನೀನು – | ಇದು – |
| ನೀನು – | ಅವಳು – | |
| ಅವನು – | ಇವಳು – | |

*** ಬಹುವಚನ :**

| ಪುಲ್ಲಿಂಗ/ ಸ್ತ್ರೀಲಿಂಗ | ನಪುಂಸಕಲಿಂಗ |
|---|---|
| ನಾವು, ಇವರು – | ಅವು, ಇವು – |
| ನೀವು, ಅವರು – | |

**ಕೊಟ್ಟಿರುವ ಪದಗಳನ್ನು "ಅ" ಕಾರಾದಿಯಾಗಿ ಬರೆಯಿರಿ.**

**ಛತ್ರಿ, ಇರುಳು, ಷಟ್ಪದಿ, ಚಪ್ಪರ,**
**ಒಲವು, ಬಾನು, ಔತಣ, ಉಡುಗೆ,**
**ಝರಿ, ರಾಷ್ಟ್ರ, ಶಿಖರ, ಆಸಕ್ತಿ,**
**ಗಣಪತಿ, ಏಲಕ್ಕಿ, ಋಣ, ಕರ್ತವ್ಯ,**
**ತಕ್ಕಡಿ, ಸಮರ**

______________________________

______________________________

______________________________

______________________________

**ಮಾರ್ಗದರ್ಶನ:**
* ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪಠ್ಯ/ಪದ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.
* ವ್ಯಾಕರಣಾಂಶದ ಹೆಚ್ಚಿನ ಮಾಹಿತಿಗಾಗಿ ಅಭ್ಯಾಸ ಪುಸ್ತಕವನ್ನು ಬಳಸುವುದು.

DIET CHIKMAGALORE

## ಘಟಕ: 1. ಪುಟ್ಟಜ್ಜಿ ಪುಟ್ಟಜ್ಜಿ ಕಥೆ ಹೇಳು

**ಅ) ಈ ಕೆಳಗಿನ ಪದಗಳ ಅರ್ಥ ಬರೆಯಿರಿ**

1) ಪ್ರಾಣಿಗಿಂಡಿ – ____________
2) ಭಯ – ________________
3) ತೊಗಟೆ – ______________
4) ಮದ್ದು – _______________
5) ಆಶ್ರಯ – ________________

**ಆ) ಹೊಂದಿಸಿ ಬರೆಯಿರಿ.**

| | | |
|---|---|---|
| 1) ಪುಟ್ಟಜ್ಜಿ | – ಜಿಂಕೆ | ____________ |
| 2) ಕಾಡು | – ಸೊಪ್ಪುಸದೆ, ಬೇರು, ತೊಗಟೆ | ____________ |
| 3) ಚುಕ್ಕೆ | – ಕಥೆ | ____________ |
| 4) ಮದ್ದು | – ಊರು ಬೆಳೆಯಿತು | ____________ |
| 5) ಹಳ್ಳದ ದಂಡೆ | – ಹುಲಿ, ಚಿರತೆ, ಕಾಡುಕೋಣ | ____________ |

**ಇ) ಒಂದಕ್ಕೊಂದು ಸಂಬಂಧವಿರುವ ಪದಗಳನ್ನು ಆರಿಸಿ ಬರೆಯಿರಿ.**

**ಮಾದರಿ: ಊರು, ಹಳ್ಳಿ, ಮೈಸೂರು, ಪಟ್ಟಣ, = ಊರು, ಹಳ್ಳಿ, ಪಟ್ಟಣ**

1) ಮಗ, ಮಗಳು, ರಾಧೆ, ತಂದೆ = ________________________________
2) ಪರ್ವತ, ನದಿ, ವಿದ್ವಾಂಸ, ಬೆಟ್ಟ = ________________________________
3) ಕೃಷ್ಣ, ರಾಧೆ, ತಂದೆ, ಸರೋಜ = ________________________________
4) ಗಂಗಾ, ತುಂಗಾ, ಸಮುದ್ರ, ಕಾವೇರಿ = ________________________________
5) ಕಿವುಡ, ಮೂಗ, ಕುಂಟ, ನದಿ = ________________________________
6) ವಿದ್ವಾಂಸ, ವೈದ್ಯ, ಶಿಕ್ಷಕ, ಊರು = ________________________________

**ಈ) ಪುಟ್ಟಜ್ಜಿ ಪುಟ್ಟಜ್ಜಿ ಕಥೆ ಹೇಳು ಪಾಠದಲ್ಲಿ ಬಂದಿರುವ ಪ್ರಾಣಿಗಳ ಹೆಸರನ್ನು ಪಟ್ಟಿ ಮಾಡಿರಿ.**

________________________________________________
________________________________________________
________________________________________________
________________________________________________

**ಉ) ಪುಟ್ಟಜ್ಜಿ ಪುಟ್ಟಜ್ಜಿ ಕಥೆ ಹೇಳು ಪಾಠದ ಕೃತಿಕಾರರ ಪರಿಚಯವನ್ನು ಮಾಡಿ.**

________________________________________________
________________________________________________
________________________________________________
________________________________________________
________________________________________________

DIET CHIKMAGALORE

ತರಗತಿ – 7. **ಅಭ್ಯಾಸದ ಹಾಳೆ–3 ಮೌಲ್ಯಮಾಪನ ಚಟುವಟಿಕೆ** ವಿಷಯ – ಕನ್ನಡ.

## ಘಟಕ: 1. ಪುಟ್ಟಜ್ಜಿ ಪುಟ್ಟಜ್ಜಿ ಕಥೆ ಹೇಳು

**ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

ಅ) ಪುಟ್ಟಜ್ಜಿ ಪುಟ್ಟಜ್ಜಿ ಕಥೆ ಹೇಳು ಗದ್ಯದ ಲೇಖಕರು ಯಾರು?

______________________________

ಆ) ಯುವಕ ಮನೆಯ ಮುಂದೆ ಏನು ಮಾಡಿದನು?

______________________________

ಇ) ಹಳ್ಳ ಹರಿದು ಊರ ಜನರನ್ನು ಏನು ಮಾಡಿದೆ?

______________________________

ಉ) ಹುಲಿ ಸೋತು ಏನು ಮಾಡಿತು ?

______________________________

**2) ಈ ವಾಕ್ಯಗಳನ್ನು ಯಾರು, ಯಾರಿಗೆ? ಹೇಳಿದರು ಎಂಬುದನ್ನು ಬರೆಯಿರಿ**

ಅ) "ಏಯ್ ಯುವಕ ಈ ಜಿಂಕೆ ನನ್ನ ಆಹಾರ"

______________________________

ಆ) "ನಾನು ಚುಕ್ಕಿಯನ್ನು ಬಿಟ್ಟು ಇರಲಾರೆ"

______________________________

**3) ಮೊದಲೆರಡು ಪದಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.**

ಅ. ಮಿಡಿ : ಹಣ್ಣಾಗದೆ :: ಎಳೆಗರು : __________

ಆ. ಉಡುರಾಜ : ಚಂದ್ರ :: ನ್ಯಗ್ರೋಧ : __________

ಇ. ಗೌರವ : ಅಗೌರವ :: ಧರ್ಮ : __________

ಉ. ಇಹಲೋಕ : ಭೂಲೋಕ :: ಪರಲೋಕ : __________

ಊ. ಯೋಗಿ : ಜೋಗಿ :: ಸಂಧ್ಯಾ : __________

ಋ. ಹಸು : ಸಾಕುಪ್ರಾಣಿ :: ಹುಲಿ : __________

**4) ಈ ಕೆಳಗೆ ನೀಡಿರುವ ಪದಗಳಲ್ಲಿ ರೂಢನಾಮ, ಅಂಕಿತನಾಮ, ಅನ್ವರ್ಥನಾಮಗಳನ್ನು ಆರಿಸಿ ಬರೆಯಿರಿ.**

ರೋಗಿ, ಬೆಟ್ಟ, ದೇಶ, ಯಾದವಿ, ಪರ್ವತ, ವಿದ್ವಾಂಸ, ಗಗನ್, ನಭಿತ್, ವೈದ್ಯ, ಶರಣ್ಯ, ಶಿಕ್ಷಕ, ನದಿ, ಹೆಳವ, ಕೃಷ್ಣ, ಮಗಳು, ಶರಧಿ, ಭುವನ್,

| ರೂಢನಾಮ | ಅಂಕಿತನಾಮ | ಅನ್ವರ್ಥನಾಮ |
|---|---|---|
| | | |
| | | |
| | | |
| | | |

**ಮಾರ್ಗದರ್ಶನ:** * ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪಠ್ಯವನ್ನು ಕಲಿಯಲು ಅವಕಾಶ ಮಾಡಿಕೊಡುವುದು
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKMAGALORE

## ಅಭ್ಯಾಸದ ಹಾಳೆ-1 ಕಲಿಕಾಂಶ ಚಟುವಟಿಕೆ

**ತರಗತಿ :7** **ಘಟಕ: 2. ಸೀನಸೆಟ್ಟರು ನಮ್ಮ ಟೀಚರು** **ವಿಷಯ -ಕನ್ನಡ.**

**ಸೂಚನೆಗಳು:** * ಪಠ್ಯಪುಸ್ತಕದಲ್ಲಿ ನೀಡಲಾಗಿರುವ ಕವಿ ಪರಿಚಯವನ್ನು ಸ್ಪಷ್ಟವಾಗಿ ಓದುವುದು.
* ಗದ್ಯವನ್ನು ಮೊದಲು ಸ್ಪಷ್ಟವಾಗಿ ಗಟ್ಟಿಯಾಗಿ ಓದುವುದು.
* ಪ್ರವೇಶದಲ್ಲಿ ನೀಡಲಾದ ವಿಷಯದ ಅರ್ಥವನ್ನು ಗಮನಿಸಿ ಓದುವುದು.
* ಪಠ್ಯಪುಸ್ತಕದಲ್ಲಿರುವ ಹೊಸ ಪದಗಳ ಅರ್ಥವನ್ನು ಓದಿ ತಿಳಿಯುವುದು.
* ಹೊಸ ಪದಗಳ ಅರ್ಥವನ್ನು ಶಬ್ದಕೋಶದಲ್ಲಿ ಹುಡುಕಿ ಅರ್ಥೈಸಿಕೊಳ್ಳುವುದು.
* ಸಂವೇದ ಯೂಟ್ಯೂಬ್ ಕ್ಯೂ.ಆರ್. ಕೋಡ್ ಬಳಸಿ ಈ ಗದ್ಯಭಾಗದ ಸಾರಾಂಶವನ್ನು ಅರ್ಥೈಸಿಕೊಳ್ಳುವುದು.

**ಪದಗಳ ಅರ್ಥ**

*. ತೀವ್ರ – ಹೆಚ್ಚು.
*. ಲಪ್ಪಟೆ – ತಲೆಗೆ ಸುತ್ತಿದ ಬಟ್ಟೆ.
*. ಪಡಪೋಸಿ – ಕೆಲಸಕ್ಕೆ ಬಾರದ.
*. ತಳಹದಿ – ಬುನಾದಿ.
*. ಸಂವಾದಿಸು – ಮಾತನಾಡು, ಚರ್ಚೆಮಾಡು.
*. ನಾಟಿ – ಪೈರಿನ ಸಸಿಗಳನ್ನು ನೆಡುವುದು.
*. ಕಂಬಳಿಗೊಪ್ಪೆ – ಮಳೆಯಿಂದ ರಕ್ಷಿಸಿಕೊಳ್ಳಲು, ಕಂಬಳಿಯಿಂದ ಮಾಡಿದ ಮುಸುಕು.

**ವ್ಯಾಕರಣಾಂಶ**

**ಸರ್ವನಾಮ** : ನಾಮಪದಗಳ ಬದಲಾಗಿ ಬಳಸುವ ಪದಗಳನ್ನು ಸರ್ವನಾಮ ಎನ್ನುತ್ತೇವೆ.

ಸರ್ವನಾಮಗಳಲ್ಲಿ 3 ವಿಧ

**1. ಪುರುಷಾರ್ಥಕ ಸರ್ವನಾಮಗಳು.**

*. ಉತ್ತಮ ಪುರುಷ ಸರ್ವನಾಮ
*. ಮಧ್ಯಮ ಪುರುಷ ಸರ್ವನಾಮ
*. ಪ್ರಥಮ ಪುರುಷ ಸರ್ವನಾಮ

ಉದಾ:- ನಾನು, ನನ್ನನ್ನು, ನನ್ನಿಂದ, ನಮ್ಮಲ್ಲಿ.

2. **ಆತ್ಮಾರ್ಥಕ ಸರ್ವನಾಮ** – ತಾನು, ತಾವು, ತಮ್ಮನ್ನು.
3. **ಪ್ರಶ್ನಾರ್ಥಕ ಸರ್ವನಾಮ**– ಯಾರು, ಎಂಥವನು

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಉತ್ತರಿಸಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.
*. ವ್ಯಾಕರಣಾಂಶಕ್ಕೆ ಸಂಬಂಧಿಸಿದಂತೆ ವಿವರಣೆಯನ್ನು ಪಠ್ಯಪುಸ್ತಕದಿಂದ ಪಡೆಯುವುದು

DIET CHIKMAGALORE

ತರಗತಿ :7

## ಅಭ್ಯಾಸದ ಹಾಳೆ-2 ಪುರ್ನಬಲನ ಚಟುವಟಿಕೆ

ವಿಷಯ: ಕನ್ನಡ

### ಘಟಕ: 2. ಸೀನಸೆಟ್ಟರು ನಮ್ಮ ಟೀಚರು.

**ಅ) ಖಾಲಿ ಬಿಟ್ಟ ಸ್ಥಳದಲ್ಲಿ ಪ್ರಾಸಪದಗಳನ್ನು ಬರೆಯಿರಿ**

1) ಮನೆಗೆ ಬೇಕು ಬಾಗಿಲು, ಉಳಲು ಬೇಕು ____________
2 ಆಕಳಿಗೆ ಬೇಕು ಹುಲ್ಲು, ಜಗಿಯಲು ಬೇಕು ____________
3) ಮಳೆಗಾಲದಲ್ಲಿ ಬರುವುದು ನೆರೆ, ಸಾಗರದಲ್ಲಿ ಬರುವುದು ____________
4) ಆಮೆಯ ಮೈಮೇಲೆ ಚಿಪ್ಪು, ಸಮುದ್ರದ ನೀರು ____________

**ಆ) ಸ್ವಂತ ವಾಕ್ಯ ರಚಿಸಿ.**

1. **ಲಪ್ಪಟೆ** = ____________
2. **ಸಂವಾದಿಸು** = ____________
3. **ನಾಟಿ** = ____________
4. **ವೇಷಭೂಷಣ** = ____________

**ಇ). ಈ ಕೆಳಗಿನ ವಾಕ್ಯಗಳಿಗೆ ಸರಿ ಹೊಂದುವ ಒಂದು ಪದ ಬರೆಯಿರಿ**

1) ಶಿಷ್ಯರಿಗೆ ಶಿಕ್ಷಣ ನೀಡುವವನು – ____________
2) ಸದಾ ಕಷ್ಟಪಟ್ಟು ದುಡಿಯುವವನು – ____________
3) ಇನ್ನೊಬ್ಬರಿಗೆ ಉಪಕಾರ ಮಾಡುವವನು – ____________
4) ವಿದ್ಯೆಯನ್ನು ಸಂಪಾದಿಸುವವನು – ____________
5) ಪರರ ಹಿತವನ್ನು ಬಯಸುವವನು – ____________

**ಈ) ಸೀನಸೆಟ್ಟರು ನಮ್ಮ ಟೀಚರು ಗದ್ಯಭಾಗದಲ್ಲಿ ಬರುವ ಶಿಶು ಪ್ರಾಸವನ್ನು ದುಂಡಾಗಿ ಬರೆದು ಓದಿ.**

____________ ____________
____________ ____________
____________ ____________

**ಉ) ಈ ಕೆಳಗೆ ನೀಡಿರುವ ಪದಗಳಲ್ಲಿ ಬೇಸಾಯಕ್ಕೆ ಸಂಬಂಧಿಸಿದ ಪದಗಳನ್ನು ಮತ್ತು ಶಾಲೆಗೆ ಸಂಬಂಧಿಸಿದ ಪದಗಳನ್ನು ಆರಿಸಿ ಬರೆಯಿರಿ.**

ಬೇಸಾಯ – ____________

ಗದ್ದೆ, ಬೆಂಚು, ಸಸಿ, ಮೇಷ್ಟ್ರು, ಕಪ್ಪುಹಲಗೆ, ನಾಟಿ ಪೈರು, ಪುಸ್ತಕ, ಪೆನ್ನು, ಜಮೀನು, ಗಂಟೆ, ರೈತ, ಕೆಸರು, ತೆನೆ, ಗೊಬ್ಬರ, ಸೀಮೆಸುಣ್ಣ.

ಶಾಲೆ – ____________

**ಊ) ಕೆಳಗೆ ಕೊಟ್ಟ ಚೌಕಟ್ಟಿನಲ್ಲಿ ಅಕ್ಷರಗಳಿಂದ ವೃತ್ತಿಗಳ ಹೆಸರುಗಳನ್ನು ಪಟ್ಟಿಮಾಡಿ.**

ಮಾದರಿ:- ವೈದ್ಯ

*. ____________
*. ____________
*. ____________
*. ____________
*. ____________

| | | | | | |
|---|---|---|---|---|---|
| ಇ | ಆ | ಚ | ಕ | ಶಿ | ಮ್ಮಾ |
| ವೈ | ಕ್ಷ | ಗಿ | ರೈ | ಕೂ | ಅ |
| ತ | ಕ್ಷಿ | ರ | ಡ | ಸಾ | ಬಾ |
| ಲಿ | ಗಾ | ಬ | ಕ್ಕ | ದ್ಯ | ರಿ |

DIET CHIKMAGALORE

ತರಗತಿ :7

## ಅಭ್ಯಾಸದ ಹಾಳೆ–3 ಮೌಲ್ಯಮಾಪನ ಚಟುವಟಿಕೆ

ವಿಷಯ: ಕನ್ನಡ

### ಘಟಕ: 2. ಸೀನಸೆಟ್ಟರು ನಮ್ಮ ಟೀಚರು.

**1. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ**

ಅ) ಸೀನಸೆಟ್ಟರು ನಮ್ಮ ಟೀಚರು ಎಂಬ ಗದ್ಯವನ್ನು ಯಾವ ಕೃತಿಯಿಂದ ಆರಿಸಿಕೊಳ್ಳಲಾಗಿದೆ?

______________________________________________

ಆ) ಮಾಂಡವಿ ಟೀಚರ್ ಯಾರನ್ನು ಪರಿಚಯಿಸಿದರು?

______________________________________________

ಇ) ಸೀನಸೆಟ್ಟರು ಜಮೀನಿನಲ್ಲಿ ಏನನ್ನು ಬೆಳೆಯುತ್ತಿದ್ದರು?

______________________________________________

ಈ) ಮನೆಯ ಅಟ್ಟ ಮಕ್ಕಳಿಗೆ ಯಾವ ಟವರ್ ಆಗಿ ಪರಿವರ್ತಿತಗೊಂಡಿತು?

______________________________________________

**2. ಮಾದರಿಯಂತೆ ವಿರುದ್ಧಾರ್ಥಕ ಪದಗಳನ್ನು ಬರೆಯಿರಿ.**

ಮಾದರಿ – ಶಿಸ್ತು * ಅಶಿಸ್ತು

ಶಿಸ್ತು, ಸುಲಭ, ಸಾಧ್ಯ,
ದೂರ, ಕಷ್ಟ,
ಸಂಕೋಚ, ನಂಬಿಕೆ,
ಭಾರ, ಹಿರಿಯ,
ಪ್ರಾರಂಭ.

______________________________________________

______________________________________________

______________________________________________

______________________________________________

ಕಠಿಣ, ಅಸಾಧ್ಯ,
ಮುಕ್ತಾಯ, ಹಗುರ, ಸುಖ,
ಕಿರಿಯ, ಅಪನಂಬಿಕೆ,
ಸುಖ, ಹತ್ತಿರ,
ನಿಸ್ಸಂಕೋಚ, ಅಶಿಸ್ತು.

**3. ಕೆಳಗಿನ ಚಿತ್ರದಲ್ಲಿ ನೀಡಿರುವ ಪದಗಳಲ್ಲಿ ಪುರುಷಾರ್ಥಕ ಸರ್ವನಾಮ, ಆತ್ಮಾರ್ಥಕ ಸರ್ವನಾಮ ಹಾಗೂ ಪ್ರಶ್ನಾರ್ಥಕ ಸರ್ವನಾಮಗಳನ್ನು ಆರಿಸಿ ಬರೆಯಿರಿ.**

<u>ಸರ್ವನಾಮಗಳು</u>

ನನ್ನಿಂದ, ತಾನು, ನಾನು,
ತನ್ನ, ಯಾರು, ನಮ್ಮಲ್ಲಿ,
ಎಂಥವಳು, ತಾವು.

| ಪುರುಷಾರ್ಥಕ ಸರ್ವನಾಮ | ಆತ್ಮಾರ್ಥಕ ಸರ್ವನಾಮ | ಪ್ರಶ್ನಾರ್ಥಕ ಸರ್ವನಾಮ |
|---|---|---|
| | | |
| | | |
| | | |

**4. ಕೋಷ್ಟಕದಲ್ಲಿರುವ ಸಸ್ಯಗಳಿಗೆ ಸಂಬಂಧಿಸಿದ ಪದಗಳಿಗೆ ಹಸಿರು ಬಣ್ಣ ಮತ್ತು ನೀರಿಗೆ ಸಂಬಂಧಿಸಿದ ಪದಗಳಿಗೆ ನೀಲಿ ಬಣ್ಣದ ವೃತ್ತ ಹಾಕಿರಿ.**

| | | | | | | | | |
|---|---|---|---|---|---|---|---|---|
| ಸರೋವರ | ಕೊಂಬೆ | ನದಿ | ಪಾತಿ | ಬೇರು | ರೆಂಬೆ | ಗಿಡ | ಹಳ್ಳ | ಕಡಲು |
| ಎಲೆ | ಸಸಿ | ಜಲಪಾತ | ಸಿಪ್ಪೆ | ಟೊಂಗೆ | ಪ್ರವಾಹ | ಹೊಳೆ | ತರಕಾರಿ | ಬಳ್ಳಿ |
| ತೋಡು | ಪತ್ರ | ಸೊಪ್ಪು | ಕೆರೆ | ಗದ್ದೆ | ಬೇರು | ಭತ್ತ | ಬಾವಿ | ತಳಿರು |
| ಮೂಲಿಕೆ | ದಳ | ಮರ | ಹೊಲ | ಮೊಗ್ಗು | ಕೊಳ | ಗರಿಕೆ | ಕಾಂಡ | ನಲ್ಲಿ |

**5. ನಿಮ್ಮ ಮನೆಯ ಹಿರಿಯರಿಂದ ಬೇಸಾಯದ ವಿಧಾನಗಳನ್ನು ಕೇಳಿ, ನಿಮ್ಮ ಮಾತುಗಳಲ್ಲಿ ನೋಟ್ ಪುಸ್ತಕದಲ್ಲಿ ಬರೆದು ಓದಿ.**

DIET CHIKMAGALORE

**ತರಗತಿ :7** **ಅಭ್ಯಾಸದ ಹಾಳೆ–1 ಕಲಿಕಾಂಶ ಚಟುವಟಿಕೆ** **ವಿಷಯ: ಕನ್ನಡ**

## ಘಟಕ: 3. ಅನ್ನದ ಹಂಗು ಅನ್ಯರ ಸ್ವತ್ತು

**ಸೂಚನೆಗಳು** * ಪಠ್ಯಪುಸ್ತಕದಲ್ಲಿ ನೀಡಲಾಗಿರುವ ಅನ್ನದ ಹಂಗು ಅನ್ಯರ ಸ್ವತ್ತು ಪಠ್ಯಾಂಶವನ್ನು ಸ್ಪಷ್ಟವಾಗಿ ಗಟ್ಟಿಯಾಗಿ ಓದುವುದು.
* ಪ್ರವೇಶದಲ್ಲಿ ನೀಡಲಾದ ವಿಷಯದ ಅರ್ಥವನ್ನು ಗಮನಿಸಿ ಓದುವುದು.
* ಪದಗಳ ಅರ್ಥವನ್ನು ಓದಿ ತಿಳಿಯುವುದು.
* ಹೊಸ ಪದಗಳ ಅರ್ಥವನ್ನು ಶಬ್ದಕೋಶದಲ್ಲಿ ಹುಡುಕಿ ಅರ್ಥೈಸಿಕೊಳ್ಳುವುದು.
* ಕ್ಯೂಆರ್ ಕೋಡ್‌ನಲ್ಲಿ ಲಭ್ಯವಿರುವ ಈ ಗದ್ಯಭಾಗವನ್ನು ವೀಕ್ಷಿಸುವುದು.

**ಪದಗಳ ಅರ್ಥ**

1. ದಾಕ್ಷಿಣ್ಯ – ಸಂಕೋಚ, ಹಿಂಜರಿಕೆ, ಇನ್ನೊಬ್ಬರಿಗೆ ನೋವಾಗದಂತೆ ಅವರ ಮನಸ್ಸನ್ನು ಅನುಸರಿಸಿ ನಡೆದುಕೊಳ್ಳುವುದು.
2. ಮರ್ಜಿ – ಇಷ್ಟ
3. ಶುಶ್ರೂಷೆ – ಉಪಚಾರ. ಸೇವೆ
4. ಸಾರಥಿ – ರಥವನ್ನು ನಡೆಸುವ ಚಾಲಕ.

**ವ್ಯಾಕರಣಾಂಶ: ವಿಭಕ್ತಿ ಪ್ರತ್ಯಯ**

ಕೊಟ್ಟೆ ಕಟ್ಟಲು **ಕೊಂಬೆಗಳನ್ನು** ಬಗ್ಗಿಸುತ್ತೇವೆ.
ರಾಜು **ಗಿಡವನ್ನು** ನೆಟ್ಟನು.
ಕೆಲಸಗಾರ ಇರುವೆಗಳು **ರಾಣಿಗೆ** ಆಹಾರ ತಿನ್ನಿಸುತ್ತವೆ.
ಕಮಲ **ಮನೆಗೆ** ಹೋದಳು.
ಚಗಳಿ ಇರುವೆಗಳು **ಮರದಲ್ಲಿ** ಕೊಟ್ಟೆ ಕಟ್ಟುತ್ತವೆ.
ಪೂರ್ಣಿಮ **ಪೇಟೆಯಲ್ಲಿ** ಆಟಿಕೆ ಕೊಂಡಳು.

ಈ ರೀತಿ ವಾಕ್ಯಗಳಲ್ಲಿ ಬಳಕೆಯಾಗುವ ವಿವಿಧ ಪದಗಳ ನಡುವೆ ಪರಸ್ಪರ ಸಂಬಂಧ ಕಲ್ಪಿಸುವ ಶಬ್ದಗಳೇ 'ವಿಭಕ್ತಿ ಪ್ರತ್ಯಯಗಳು'. ಈ ಪ್ರತ್ಯಯಗಳು ಹೀಗಿವೆ.

1. 'ಉ'
2. 'ಅನ್ನು'
3. 'ಇಂದ'
4. 'ಗೆ'
5. 'ದೆಸೆಯಿಂದ'
6. 'ಅ'
7. 'ಅಲ್ಲಿ'.

ಪಾಠದಲ್ಲಿ ಬಂದಿರುವ ವಿಭಕ್ತಿ ಪ್ರತ್ಯಯ ಸಹಿತವಾಗಿರುವ ಪದಗಳನ್ನು ಪಟ್ಟಿ ಮಾಡು.

**ಮಾದರಿಯಂತೆ ಪದಗಳ ಅರ್ಥ ಬರೆದು ಸ್ವಂತ ವಾಕ್ಯದಲ್ಲಿ ಬರೆಯಿರಿ.**

**ಮಾದರಿ :** ದಾಕ್ಷಿಣ್ಯ = ಸಂಕೋಚ– ಒಳ್ಳೆಯ ಕೆಲಸ ಮಾಡಲು ಯಾವುದೇ ದಾಕ್ಷಿಣ್ಯಕ್ಕೆ ಒಳಗಾಗಬಾರದು.

ಯುದ್ಧ = ________________ ವಾಕ್ಯ________________

ಮರ್ಜಿ =________________ ವಾಕ್ಯ ________________

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಉತ್ತರಿಸಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.
* ವ್ಯಾಕರಣಾಂಶಕ್ಕೆ ಸಂಬಂಧಿಸಿದಂತೆ ವಿವರಣೆಯನ್ನು ಪಠ್ಯಪುಸ್ತಕದಿಂದ ಪಡೆಯುವುದು.

DIET CHIKMAGALORE


ತರಗತಿ – 7. **ಅಭ್ಯಾಸದ ಹಾಳೆ–2 ಪುನರ್ಬಲನ ಚಟುವಟಿಕೆಗಳು** ವಿಷಯ – ಕನ್ನಡ.

## ಘಟಕ: 3. ಅನ್ನದ ಹಂಗು ಅನ್ಯರ ಸ್ವತ್ತು

**1) ಆವರಣದಲ್ಲಿ ಕೊಟ್ಟಿರುವ ಸೂಕ್ತ ಪದವನ್ನು ಆಯ್ದು ಕ್ರಿಕೆಟ್ ಅಂಪೈರ್ ತೋರಿಸುವ ಸಂಜ್ಞಾ ವಿವರಗಳನ್ನು ಖಾಲಿ ಜಾಗದಲ್ಲಿ ಭರ್ತಿಮಾಡಿ. (ವೈಡ್, ನೋಬಾಲ್, ಸಿಕ್ಸ್, ಫೋರ್, ಔಟು)**

1. ಬಲಗೈಯನ್ನು ಬಲಕ್ಕೆ ಚಾಚುವುದು ________________
2. ಎರಡೂ ಕೈಗಳನ್ನು ಮೇಲೆತ್ತುವುದು ________________
3. ಬಲಗೈಯನ್ನು ಮುಂದೆ ಚಾಚಿ ಎಡದಿಂದ ಬಲಕ್ಕೆ ನಿಧಾನವಾಗಿ ಚಲಿಸುವುದು __________
4. ಬಲಗೈ ತೋರುಬೆರಳು ತೋರಿಸುತ್ತಾ ಮೇಲೆತ್ತುವುದು ______________

**2) ಕೆಳಗೆ ಕೊಟ್ಟಿರುವ ಚಿತ್ರಗಳಿಗೆ ಸರಿ ಹೊಂದುವ ಸಂಜ್ಞೆಯನ್ನು ಗೆರೆ ಎಳೆದು ಹೊಂದಿಸಿ.**

|  |  |  |  |
|---|---|---|---|
| ತುಂಬ ಚೆನ್ನಾಗಿದೆ | ಮೌನವಾಗಿರು | ಆಯಿತು | ಅಲ್ಲಿ ನೋಡು |

**3) ಈ ಕೆಳಗೆ ಸೂಚಿಸಿದ ಕ್ರಿಯೆಗಳನ್ನು ಆಂಗಿಕವಾಗಿ ಪೋಷಕರಿಗೆ/ಸ್ನೇಹಿತರಿಗೆ ತೋರಿಸಿ.**

**1) ತುಂಬಾ ಹಸಿವಾಗಿದೆ 2) ಬಡಿಸಿದ್ದು ಸಾಕು 3) ಲೋಟಕ್ಕೆ ನೀರು ಹಾಕು 4) ಊಟ ತುಂಬಾ ಚೆನ್ನಾಗಿದೆ.**

**4) .ಈ ಪಠ್ಯವನ್ನು ಓದಿ ಅದರಲ್ಲಿನ ವಿಭಕ್ತಿ ಪ್ರತ್ಯಯ ಗುರುತಿಸಿ ಬರೆಯಿರಿ.**

ಮಾರ್ಚ್ ತಿಂಗಳ ಸುಡು ಬಿಸಿಲಿನ ಒಂದು ಶನಿವಾರ. ಶಾಲೆಯನ್ನು ಮುಗಿಸಿ ರಾಜು ಓಡುತ್ತಲೇ ಮನೆಗೆ ಬಂದನು. ಸೆಕೆಯ ದೆಸೆಯಿಂದಲೋ ಅಥವಾ ಓಡುತ್ತಾ ಬಂದಿದ್ದರಿಂದಲೋ ಬಹಳ ದಣಿವಾಗಿದ್ದರಿಂದ ಬಾಯಾರಿಕೆ ತಣಿಸಲು ಅಮ್ಮನಿಗೆ ಕುಡಿಯಲು ನೀರು ಕೇಳಿದನು. ಆಗ ಅವನ ತಾಯಿ ಒಂದು ಲೋಟದಲ್ಲಿ ತಂಪಾದ ನೀರನ್ನು ತಂದು ಕೊಟ್ಟಳು. ನೀರು ಕುಡಿದು ಅಮ್ಮನಿಗೆ ಧನ್ಯವಾದ ಹೇಳಿದನು.

| ಕ್ರ.ಸಂ | ವಿಭಕ್ತಿ | ಪ್ರತ್ಯಯ | ನಾಮಪದ + ವಿಭಕ್ತಿ ಪ್ರತ್ಯಯ |
|---|---|---|---|
| 1 | ಪ್ರಥಮ | ಉ | ಬಂದ+ಉ==ಬಂದನು |
| 2 | ದ್ವಿತೀಯ | | |
| 3 | ತೃತೀಯಾ | | |
| 4 | ಚತುರ್ಥಿ | | |
| 5 | ಪಂಚಮಿ | | |
| 6 | ಷಷ್ಠಿ | | |
| 7 | ಸಪ್ತಮಿ | | |

**5) ಪಠ್ಯ ಪುಸ್ತಕದ ಪುಟ ಸಂಖ್ಯೆ 26ರಲ್ಲಿರುವ “ಕೃತಿಕಾರರ ಪರಿಚಯ” ಓದಿ, ಕೆಳಗಿನ ಬಿಟ್ಟ ಜಾಗಗಳನ್ನು ಸೂಕ್ತ ಉತ್ತರದಿಂದ ತುಂಬಿ.**

ಅ) ಗಿರೀಶರಾವ್ ಹತ್ವಾರ್ ಇವರ ಕಾವ್ಯನಾಮ :

ಆ) ಲೇಖಕರ ಜನ್ಮ ಸ್ಥಳ : ಹುಟ್ಟಿದ ಇಸವಿ :

ಇ) ಈ ಪಾಠವನ್ನು ಕೃತಿಯಿಂದ ಆಯ್ಕೆ ಮಾಡಲಾಗಿದೆ.

**6)ಮಾದರಿಯಂತೆ ವಾಕ್ಯ ರಚಿಸಿ.**

**ಮಾದರಿ** : ನನ್ನ ಬಳಿ ಒಂದು ಚೆಂಡು ಇದೆ. ನಮ್ಮ ಬಳಿ ನಾಲ್ಕು ಚಂಡುಗಳಿವೆ

1) ಹಳ್ಳಿಬೈಲಿನಿಂದ ನಮ್ಮ ಶಾಲೆಗೆ ಒಬ್ಬಳು ಹುಡುಗಿ ಬಂದಿದ್ದಾಳೆ

.________________________________________________

2) ನಮ್ಮ ಮನೆಯಲ್ಲಿ ಒಂದು ಹಸು ಇದೆ

.________________________________________________

3) 7ನೇ ತರಗತಿ ಕೊಠಡಿಯಲ್ಲಿ ಒಂದು ಮೇಜು ಇದೆ

________________________________________________

DIET CHIKMAGALORE

**ತರಗತಿ – 7.** **ಅಭ್ಯಾಸದ ಹಾಳೆ–3 ಮೌಲ್ಯಮಾಪನ ಚಟುವಟಿಕೆ** **ವಿಷಯ – ಕನ್ನಡ**

## ಘಟಕ : 3. ಅನ್ನದ ಹಂಗು ಅನ್ಯರ ಸ್ವತ್ತು

**1. ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರಿಸಿ.**

1) ಶಲ್ಯನ ತಂಗಿ ಯಾರು?

______________________________________________

2) ಶಲ್ಯನ ಸೇನೆಯ ಜೊತೆಯಲ್ಲಿ ಯಾರು ಪಟ್ಟಣಕ್ಕೆ ಹೊರಟರು?

______________________________________________

3) ಶಲ್ಯನಿಗೆ ಆದರಾತಿಥ್ಯದ ಏರ್ಪಾಡು ಮಾಡಿದವರು ಯಾರು?

______________________________________________

4) ಶಲ್ಯ ಯಾರ ಪರವಾಗಿ ಯುದ್ಧ ಮಾಡಿದಂತಾಯಿತು?

______________________________________________

**2. ಈ ಕೆಳಗಿನ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ**

1) ಶಲ್ಯನಿಗೆ ದಾರಿಯುದ್ದಕ್ಕೂ ದುರ್ಯೋಧನ ಮಾಡಿದ ವ್ಯವಸ್ಥೆಗಳೇನು?

______________________________________________

______________________________________________

2) ಶಲ್ಯ ದುರ್ಯೋಧನಿಗೆ ನೀಡಿದ ಭರವಸೆಗಳು ಯಾವುವು?

______________________________________________

______________________________________________

3) ಶಲ್ಯನಿಗೆ ಏಕೆ ಅಚ್ಚರಿಯಾಯಿತು?

______________________________________________

______________________________________________

4) ದುರ್ಯೋಧನ ಶಲ್ಯನಿಗೆ ಏನು ಕೇಳಿದನು?

______________________________________________

______________________________________________

**3. ಆವರಣದಲ್ಲಿ ಸೂಚಿಸಿರುವಂತೆ ಉತ್ತರಿಸಿ.**

1.' ಬಹಳ ಅದ್ಭುತವಾದ ಸೇವೆ ಮಾಡಿದ್ದೀರಿ ' ( ಈ ಮಾತನ್ನು ಯಾರು ಯಾರಿಗೆ ಹೇಳಿದರು)

2. ಸ್ವಂತ ವಾಕ್ಯ ರಚಿಸು : ಬೆರಗಾಗು – ______________________________

3. ಇರುವೆ <u>ಗೂಡಿನಿಂದ</u> ಬಂದಿತು (ಗೆರೆ ಎಳೆದ ಪದದ ವಿಭಕ್ತಿ ಪ್ರತ್ಯಯ ಹೆಸರಿಸಿ

***. ನಿಮ್ಮ ಸುತ್ತಲಿನ ಪರಿಸರದಲ್ಲಿ ನಡೆಯುವ ಸಂಭಾಷಣೆಯಲ್ಲಿ ಆಂಗಿಕ ಪ್ರತಿಕ್ರಿಯೆಗಳನ್ನು ಗಮನಿಸಿ.**

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಉತ್ತರಿಸಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKMAGALORE

# ಅಭ್ಯಾಸದ ಹಾಳೆ–1

ವಿಷಯ: ಕನ್ನಡ    ಘಟಕ : 4. ಪರಿಸರ ಸಮತೋಲನ    ತರಗತಿ :7

ಕಲಿಕಾಂಶ ಚಟುವಟಿಕೆ

ಪರಿಸರ ಸಮತೋಲನ–1    ಪರಿಸರ ಸಮತೋಲನ–2

**ಸೂಚನೆಗಳು:**
* ಪಠ್ಯಪುಸ್ತಕದಲ್ಲಿ ನೀಡಲಾಗಿರುವ ಪರಿಸರ ಸಮತೋಲನ ಪಠ್ಯಾಂಶವನ್ನು ಸ್ಪಷ್ಟವಾಗಿ ಗಟ್ಟಿಯಾಗಿ ಓದುವುದು.
* ಪ್ರವೇಶದಲ್ಲಿ ನೀಡಲಾದ ವಿಷಯದ ಅರ್ಥವನ್ನು ಗಮನಿಸಿ ಓದುವುದು.
* ಪದಗಳ ಅರ್ಥವನ್ನು ಓದಿ ತಿಳಿಯುವುದು.
* ಹೊಸ ಪದಗಳ ಅರ್ಥವನ್ನು ಶಬ್ದಕೋಶದಲ್ಲಿ ಹುಡುಕಿ ಅರ್ಥೈಸಿಕೊಳ್ಳುವುದು.
* ಕ್ಯೂಆರ್ ಕೋಡ್‌ನಲ್ಲಿ ಲಭ್ಯವಿರುವ ಈ ಗದ್ಯಭಾಗವನ್ನು ವೀಕ್ಷಿಸುವುದು.

## ಪದಗಳ ಅರ್ಥ

1. ಆಚ್ಛಾದನ – ಬಟ್ಟೆ, ವಸ್ತ್ರ
2. ಪರ್ಣ – ಎಲೆ
3. ಗೋಣು – ಕುತ್ತಿಗೆ
4. ವೀಳ್ಯ – ತಾಂಬೂಲ

## ವ್ಯಾಕರಣಾಂಶ

### ಕನ್ನಡ ಸಂಧಿಗಳು

1. ಲೋಪಸಂಧಿ – ಊರು + ಅಲ್ಲಿ = ಊರಲ್ಲಿ
2. ಆಗಮ ಸಂಧಿ – ಮನೆ + ಅನ್ನು = ಮನೆಯನ್ನು
3. ಆದೇಶ ಸಂಧಿ – ಬೆಟ್ಟ + ತಾವರೆ = ಬೆಟ್ಟದಾವರೆ

### ಸಂಸ್ಕೃತ ಸಂಧಿಗಳು

1. ಸವರ್ಣದೀರ್ಘ ಸಂಧಿ – ದೇವ + ಆಲಯ = ದೇವಾಲಯ
2. ಗುಣಸಂಧಿ – ಮಹ + ಈಶ = ಮಹೇಶ
3. ವೃದ್ಧಿಸಂಧಿ – ಏಕ + ಏಕ = ಏಕೈಕ
4. ಯಣ್‌ಸಂಧಿ – ಇತಿ + ಆದಿ = ಇತ್ಯಾದಿ
5. ಜಶ್ತ್ವಸಂಧಿ – ದಿಕ್ + ಅಂತ = ದಿಗಂತ
6. ಶ್ಚುತ್ವಸಂಧಿ – ಮನಸ್ + ಶುದ್ಧಿ = ಮನಶ್ಶುದ್ಧಿ
7. ಅನುನಾಸಿಕಸಂಧಿ – ಷಟ್ + ಮುಖ = ಷಣ್ಮುಖ

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಉತ್ತರಿಸಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.
* ವ್ಯಾಕರಣಾಂಶಕ್ಕೆ ಸಂಬಂಧಿಸಿದಂತೆ ವಿವರಣೆಯನ್ನು ಪಠ್ಯಪುಸ್ತಕದಿಂದ ಪಡೆಯುವುದು.

DIET CHIKMAGALORE

## ಘಟಕ : 4. ಪರಿಸರ ಸಮತೋಲನ

**ಅ). ಮಾದರಿಯಂತೆ ಅರ್ಥ ಬರೆಯಿರಿ.**

ಮಾದರಿ: ಆಚ್ಛಾದನ = ಬಟ್ಟೆ – ವಸ್ತ್ರ

ಪರ್ಣ = ________ – ________

ಗೋಣು = ________ – ________

**ಆ) ಪಾಠವನ್ನು ಸ್ವರಭಾರದೊಂದಿಗೆ ಗಟ್ಟಿಯಾಗಿ/ಮೌನವಾಗಿ ಓದಿ ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಆನೆ ಎಷ್ಟು ವರ್ಷಕ್ಕೊಮ್ಮೆ ಮರಿ ಹಾಕುತ್ತದೆ?

________________________________

2. ಪ್ರಾಣಿಗಳ ನಡುವೆ ಯಾವುದಕ್ಕೆ ಸ್ಪರ್ಧೆ ಏರ್ಪಡುತ್ತದೆ?

________________________________

3. ಯಾವುದರಿಂದ ಮನುಷ್ಯ ಸಂಪೂರ್ಣ ಲಾಭ ಪಡೆಯಬಹುದು?

________________________________

4. ಪಿತೃಗಳ ಸಾಧನೆ ವಂಶಪರಂಪರಾಗತವಾಗಿ ಮಕ್ಕಳಿಗೆ ಬರುತ್ತದೆಯೇ?

________________________________

**ಇ) ಲೇಖಕರ ಪರಿಚಯ ಓದಿ ಕೆಳಗಿನ ಹೇಳಿಕೆಗಳನ್ನು ಸರಿಪಡಿಸಿ ಬರೆಯಿರಿ.**

1. ಡಾ!! ಕೃಷ್ಣಾನಂದ ಕಾಮಶ್‌ರವರು ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಲ್ಲಿ ಜನಿಸಿದರು.

________________________________

2.ಡಾ!! ಕೃಷ್ಣಾನಂದ ಕಾಮತ್‌ರವರು 2020ರಲ್ಲಿ ಡಾಕ್ಟರೇಟ್ ಪದವಿ ಪಡೆದರು.

________________________________

3. ಮೈಸೂರಿನಲ್ಲಿ ವೈಜ್ಞಾನಿಕ ಛಾಯಾಗ್ರಹಣ ಲ್ಯಾಬೋರೇಟರಿ ಪ್ರಾರಂಭಿಸಿದರು.

________________________________

4. ಕೃಷ್ಣಾನಂದ ಕಾಮತ್‌ರವರು 1934ರಲ್ಲಿ ಜನಿಸಿ 2002ರಲ್ಲಿ ಮರಣ ಹೊಂದಿದರು.

________________________________

**ಈ) ಕೆಳಗಿನ ಪದಗಳನ್ನು ಬಿಡಿಸಿ ಸಂಧಿ ಹೆಸರು ಬರೆಯಿರಿ..**

**ಮಾದರಿ :** ನೀನೇಕೆ = ನೀನು + ಏಕೆ – ಲೋಪಸಂಧಿ

1. ಬೆಟ್ಟದಾವರೆ = ____________ – ____________
2. ಮೊಟ್ಟೆಯಿಡು = ____________ – ____________
3. ಲೋಕೇಶ = ____________ – ____________

**ಉ) ಗಾದೆ ಮಾತಿನಲ್ಲಿನ ಪದಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ಬರೆಯಿರಿ:**

1. ನುಣ್ಣಗೆ/ ಬೆಟ್ಟ/ ದೂರದ/ ಕಣ್ಣಿಗೆ

________________________________

2. ಉಪ್ಪಿಗಿಂತ/ ದೇವರಿಲ್ಲ/ ರುಚಿಯಿಲ್ಲ/ ತಾಯಿಗಿಂತ

________________________________

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಉತ್ತರಗಳನ್ನು ಬರೆಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಾಗ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKMAGALORE

ತರಗತಿ – 7. **ಅಭ್ಯಾಸದ ಹಾಳೆ–3 ಮೌಲ್ಯಮಾಪನ ಚಟುವಟಿಕೆ** ವಿಷಯ – ಕನ್ನಡ.

**ಘಟಕ : 4. ಪರಿಸರ ಸಮತೋಲನ**

**ಅ) ಕನ್ನಡ ಸಂಧಿಗಳನ್ನು ಹೆಸರಿಸಿ ಒಂದೊಂದು ಉದಾಹರಣೆ ಕೊಡಿ.**

1. ______________________ ______________________
2. ______________________ ______________________
3. ______________________ ______________________

**ಆ) ಕೊಟ್ಟಿರುವ ಪ್ರಶ್ನೆಗಳಿಗೆ ಒಂದು ವಾಕ್ಯದಲ್ಲಿ ಉತ್ತರಿಸಿ..**

1. ಬೀಜ ಪ್ರಸರಣ ಯಾವುದರ ಮೂಲಕ ನಡೆಯುತ್ತದೆ?

______________________________________________

2.ದಟ್ಟವಾದ ಕಾಡು ಎಲ್ಲಿ ಬೆಳೆಯುತ್ತದೆ?

______________________________________________

3.ಎಲ್ಲಿ ಬಿದ್ದ ಬೀಜಗಳು ನಾಶವಾಗುತ್ತವೆ?

______________________________________________

4. ಪ್ರಾಣಿಗಳಲ್ಲಿಯೇ ದೊಡ್ಡ ಪ್ರಾಣಿ ಯಾವುದು?

______________________________________________

**ಇ) ಈ ಕೆಳಗಿನ ಪ್ರಶ್ನೆಗಳಿಗೆ ಎರಡು–ಮೂರು ವಾಕ್ಯಗಳಲ್ಲಿ ಉತ್ತರಿಸಿ.**

1. ಜಿರಾಫೆ ಹೇಗೆ ಆಹಾರ ಸ್ಪರ್ಧೆಯಲ್ಲಿ ಯಶಸ್ವಿಯಾಗುತ್ತದೆ?

______________________________________________
______________________________________________
______________________________________________

2. ಕಾಡನ್ನು ನಾಶ ಮಾಡುವುದರಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಸ್ನೇಹಿತ/ ಪೊಷಕರ/ ಶಿಕ್ಷಕರೊಂದಿಗೆ ಚರ್ಚಿಸಿ ಬರೆಯಿರಿ.

______________________________________________
______________________________________________
______________________________________________

**ಈ) ಆವರಣದಲ್ಲಿ ಸೂಚಿಸಿರುವಂತೆ ಉತ್ತರಿಸಿ**

1. ಬಿಡಿಸಿ ಬರೆದು ಸಂಧಿ ಹೆಸರಿಸಿ : ದೇವಾಲಯ =

______________________________________________

2. ಸ್ವಂತ ವಾಕ್ಯ ರಚಿಸಿ : ಹಿಂಬಾಲಿಸು –

______________________________________________

3. ಈ ಘೋಷ ವಾಕ್ಯವನ್ನು ಪೂರ್ಣಗೊಳಿಸಿ : ಕಾಡು ಬೆಳಸಿ, ನಾಡು ______________

**ಉ) ಕಾಡಿನ ನಾಶದಿಂದಾಗುವ ದುಷ್ಪರಿಣಾಮಗಳನ್ನು ಪೋಷಕರೊಂದಿಗೆ/ ಸ್ನೇಹಿತರೊಂದಿಗೆ/ ಶಿಕ್ಷಕರೊಂದಿಗೆ ಚರ್ಚಿಸಿ.**

**ಊ) ಪರಿಸರ ಸಮತೋಲನ ಕಾಪಾಡಲು ನಾವೇನು ಕ್ರಮ ಕೈಗೊಳ್ಳಬಹುದು?ಪೋಷಕರು/ ಸ್ನೇಹಿತರೊಂದಿಗೆ ಚರ್ಚಿಸಿ.**

**ಋ) ಪ್ರಾಣಿಗಳ ಆಹಾರ ವಿಹಾರ ಮತ್ತು ಜೀವನಕ್ರಮಗಳನ್ನು ಕುರಿತು ಸ್ನೇಹಿತರು /ಪೋಷಕರು/ ಶಿಕ್ಷಕರ ಜೊತೆಗೆ ಚರ್ಚಿಸಿ.**

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಉತ್ತರಗಳನ್ನು ಬರೆಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಾಗ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKMAGALORE

**ಅಭ್ಯಾಸದ ಹಾಳೆ-1 ಕಲಿಕಾಂಶ ಚಟುವಟಿಕೆ**

**ಪದ್ಯ : 1 ಗಿಡಮರ** **ಪದ್ಯ : 2. ಸ್ವಾತಂತ್ರ್ಯ ಸ್ವರ್ಗ**

**ತರಗತಿ** – 7. **ವಿಷಯ** – ಕನ್ನಡ

**ಸೂಚನೆಗಳು**

* ಪದ್ಯವನ್ನು ತಪ್ಪಿಲ್ಲದೆ ಸ್ಪಷ್ಟವಾಗಿ ಓದಿ, ಹಾಡುವುದು.
* ಪದ್ಯದ ಪದಗಳ ಅರ್ಥ ಮಾಡಿಕೊಳ್ಳುವುದು.
* ಹೊಸ ಪದಗಳ ಅರ್ಥಗಳನ್ನು ಶಬ್ದ ಕೋಶದಲ್ಲಿ ಹುಡುಕಿ ಓದಿ ಅರ್ಥಮಾಡಿಕೊಳ್ಳುವುದು.
* ಪದ್ಯವನ್ನು ಸ್ವಂತ ರಾಗದಲ್ಲಿ ಹಿರಿಯರ ಎದುರು ಹಾಡಲು ಪ್ರಯತ್ನಿಸುವುದು.
* ಕವಿ, ಕೃತಿ ಪರಿಚಯವನ್ನು ಅರ್ಥೈಸಿಕೊಂಡು ಹೇಳುವುದು.
* ಪಠ್ಯ ಪುಸ್ತಕದ 'ಗಿಡಮರ' ಮತ್ತು 'ಸ್ವಾತಂತ್ರ್ಯ ಸ್ವರ್ಗ' ಪದ್ಯ ಭಾಗವನ್ನು ಓದಿ ಬರೆದು ಅಭ್ಯಾಸ ಮಾಡುವುದು.
* ನೀಡಿರುವ ಕ್ಯೂ.ಆರ್. ಕೋಡ್‌ನಲ್ಲಿ ಈಗಾಗಲೇ ಹಾಡಿರುವ ಪದ್ಯವನ್ನು ಆಲಿಸುವುದು.

**ಓದಿ-ಬರೆಯಿರಿ..**

| | | | |
|---|---|---|---|
| ಬೊಡ್ಡೆ | – ಮರದ ಕಾಂಡದ ಭಾಗ | ನಿರ್ಮುಕ್ತ | – ಸರ್ವಸ್ವತಂತ್ರ |
| ಅನುದಿನ | – ದಿನನಿತ್ಯ | ಕರಿದು | – ಕಪ್ಪಾದ ಬಣ್ಣ |
| ತರತರ | – ವಿಧವಿಧವಾದ | ಕಡಲುಕ್ಕುವ | – ಸಮುದ್ರ ಉಕ್ಕಿದಂತೆ |
| ಮನ | – ಮನಸ್ಸು | ಹಾಳುಕೊಂಪೆ | – ನಾಶಹೊಂದಿದ ಊರು |
| ನಿರ್ಭೀತ | – ಭಯವಿಲ್ಲದ | ಮಸ್ತಕ | – ತಲೆ |
| ಹೋಳು | – ತುಂಡು | ಹರಿಗಡಿಯದೆ | – ಹರಿಯುವಿಕೆಯು ನಿಲ್ಲದೆ |
| ವಾಹಿನಿ | – ನದಿ | ಹರಹು | – ವಿಸ್ತಾರ |
| ಧ್ರುವತಾರೆ | – ಧ್ರುವ ನಕ್ಷತ್ರ (ಸ್ಥಿರವಾದ ಲಕ್ಷ್ಯ) | ವೈಶಾಲ್ಯ | – ವಿಶಾಲತೆ |

**ಮಾದರಿಯಂತೆ ಕೂಡಿಸಿ ಬರೆಯಿರಿ..**

**ಮಾದರಿ** : ನಿರ್ + ಮುಕ್ತ = ನಿರ್ಮುಕ್ತ

ಹರಿ + ಕಡಿಯದೆ =

ನಿನ್ನ + ಒಲವು =

ಧ್ರುವತಾರೆ + ಎಂದು + ಅರಿಯುವುದು =

ಮನ + ಅರಳಿ =

**ಪದಗಳಿಗೆ ಅರ್ಥ ಬರೆಯಿರಿ.**

1. ನಿರ್ಮುಕ್ತ : ____________
2. ನಿರ್ಭೀತ : ____________
3. ಹಾಳುಕೊಂಪೆ : ____________
4. ಬೊಡ್ಡೆ : ____________
5. ಮನ : ____________
6. ಮಸ್ತಕ : ____________
7. ವಾಹಿನಿ : ____________

**ಪದವನ್ನು ಬಿಡಿಸಿ ಬರೆಯಿರಿ.**

1. ಹರಿಗಡಿಯದೆ : ____________
2. ನಿನ್ನೊಲವು : ____________
3. ಮನವರಳಿ : ____________

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪದ್ಯಗಳನ್ನು ಕಲಿಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKMAGALORE

**ತರಗತಿ ; 7.** **ಅಭ್ಯಾಸದ ಹಾಳೆ–2 ಪುನರ್ಬಲನ ಚಟುವಟಿಕೆಗಳು** **ವಿಷಯ – ಕನ್ನಡ.**

## ಪದ್ಯ : 1 ಗಿಡಮರ ಪದ್ಯ : 2. ಸ್ವಾತಂತ್ರ್ಯ ಸ್ವರ್ಗ

**ಅ). ಖಾಲಿ ಬಿಟ್ಟ ಜಾಗದಲ್ಲಿ ಸರಿಯಾದ ಪದ ಆರಿಸಿ ಬರೆಯಿರಿ.**

1. ಹಸುವು ________ ಕೊಡುತ್ತದೆ. (ಹಾಲನ್ನು/ಆಲನ್ನು)
2. ____________ ಸಂಜೆ ಅಕ್ಕ ಬಂದಳು. (ಹಿಂದು/ಇಂದು)
3. ನನ್ನ ______ಬೆಂಗಳೂರು. (ಹೂರು/ ಊರು)
4. ಪುಷ್ಪ ______ ಧರಿಸಿದ್ದಾಳೆ. (ಹೋಲೆಯನ್ನು/ ಓಲೆಯನ್ನು)
5. ನಿನಗೆ ಪೆಟ್ಟಾಗಿರುವುದನ್ನು ಕಂಡು ನನಗೆ ______ ಬಂತು. (ಹಳು/ಅಳು)

**ಆ). ಪದ್ಯದ ಸಾಲುಗಳನ್ನು ಹೊಂದಿಸಿ ಬರೆಯಿರಿ.**

1. ಬೊಡ್ಡೆ ಕರಿದು – ದಿವ್ಯ ಮೌನ
2. ಹಾಳು ಕೊಂಪೆ – ಅನುದಿನ
3. ಎಲ್ಲದಕ್ಕೂ – ಚೇತನ
4 ಕಡಲುಕ್ಕುವ – ಇವನ ಮನ
5 ಅರಳುತಿಹವು – ಎಲೆಹಸಿರು

**ಇ). ಪದ್ಯದ ಸಾಲುಗಳನ್ನು ಸರಿಯಾದ ಕ್ರಮದಲ್ಲಿ ಜೋಡಿಸಿ ಬರೆಯಿರಿ.**

ಮೀರಿ ಬೆಳೆದ ಗಿಡಮರ ______________________

ಜಾತಿ–ಗೀತಿ, ಲಿಂಗ ಧರ್ಮ ______________________

ಅವನು ಇವಳು ಅದು ಇದು ______________________

ಎಣಿಸುತ್ತಿಲ್ಲ ಒಂದು ದಿನ ______________________

**ಈ) ಈ ಕೆಳಗಿನ ಚೌಕಗಳಲ್ಲಿರುವ ಭಾವನಾಮ ರೂಪವನ್ನು ಹುಡುಕಿ ಬಣ್ಣ ಹಚ್ಚಿ ಮಾದರಿಯಂತೆ ಬರೆಯಿರಿ.**

| | | | | | | | | | |
|---|---|---|---|---|---|---|---|---|---|
| ಮಾ | ಗ | ತ್ರ್ಯ | ಕಾ | ಠಿ | ಣ್ಯ | ಅ | ಸ | ಗ | ಬ |
| ಧು | ರ | ತಂ | ಕ | ಸ | ಗ | ಬ | ಹ | ಆ | ರ |
| ರ್ಯ | ಕ | ಸ್ವಾ | ಗ | ಕ | ಸ | ಗ | ಬ | ಹ | ಆ |
| ಕ | ಸ | ಗ | ಬ | ಹ | ಆ | ರ | ಕ | ಸ | ವೈ |
| ತ | ಲ | ಟ | ನಾ | ವೀ | ನ್ಯ | ಸ | ಗ | ಬ | ಶಾ |
| ಕಾ | ರು | ಣ್ಯ | ತ | ರ | ಎ | ಡ | ಐ | ದ | ಲ್ಯ |
| ಕ | ಸ | ಗ | ಬ | ಹ | ಮ | ಅ | ಬ | ಷ | ದ |

**ಮಾದರಿ :** ಸ್ವಾತಂತ್ರ – __________

ವಿಶಾಲ – __________

ನವೀನ – __________

ಕಠಿಣ – __________

ಕರುಣ – __________

ಮಧುರ – __________

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪದ್ಯಗಳನ್ನು ಕಲಿಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKMAGALORE

ತರಗತಿ – 7. **ಅಭ್ಯಾಸದ ಹಾಳೆ – 3 ಮೌಲ್ಯಮಾಪನ ಚಟುವಟಿಕೆ** ವಿಷಯ – ಕನ್ನಡ.

## ಪದ್ಯ : 1 ಗಿಡಮರ ಪದ್ಯ : 2. ಸ್ವತಂತ್ರ್ಯ ಸ್ವರ್ಗ

**ಉ. ಗಿಡಮರ ಮತ್ತು ಸ್ವಾತಂತ್ರ್ಯ ಸ್ವರ್ಗ ಪದ್ಯಕ್ಕೆ ಸಂಬಂಧಿಸಿದ ಪದಗಳನ್ನು ಬರೆಯಿರಿ.**

*** ಗಿಡಮರ :**

1. ಗಿಡಮರ ಕವನ ______ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.
2. ಕವಿಯ ಹೆಸರು ______________
3. ವಾಹಿನಿ ಪದದ ಅರ್ಥ _________
4. 'ಗಿಡ ಮರ' ಇದು ___________ (ನುಡಿಗಟ್ಟು/ ಜೋಡು ನುಡಿ)
5. ಪದ್ಯದಲ್ಲಿ 'ತರತರ' ಪದಕ್ಕೆ ಪ್ರಾಸ ಪದ_______

*** ಸ್ವಾತಂತ್ರ್ಯ ಸ್ವರ್ಗ :**

1. ಸ್ವಾತಂತ್ರ್ಯ ಸ್ವರ್ಗ ಪದ್ಯವನ್ನು _________ ಕವನ ಸಂಕಲನದಿಂದ ಆರಿಸಿಕೊಳ್ಳಲಾಗಿದೆ.
2. ಕವಿಯ ಹೆಸರು ______
3. ಹರಹು ಪದದ ಅರ್ಥ__________
4. ನಿನ್ನೊಲವು ಪದವನ್ನು ವಿಂಗಡಿಸಿದಾಗ __________
5. 'ಪ್ರೀತಿ' ಪದದ ಸಮನಾರ್ಥಕ ಪದ __________

**ಆ) ಈ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

1. ಮನುಷ್ಯನ ಮನ ಯಾವುದರ ಕೊಂಪೆಯಾಗಿದೆ? ________________________________________
2. ಕಡಲುಕ್ಕುವ ಚೇತನ ಎಲ್ಲಿ ಕಂಡು ಬರುತ್ತದೆ. ________________________________________
3. ಸರ್ವ ಸ್ವಾತಂತ್ರ್ಯವಾಗಿರುವುದು ಏನು? ________________________________________
4. ಗಿಡಮರಗಳು ಹೇಗೆ ಬೆಳೆದು ಅರಳುತ್ತವೆ? ________________________________________
5. ಬೊಡ್ಡೆ ಮತ್ತು ಎಲೆಗಳ ಬಣ್ಣಗಳಾವುವು? ________________________________________

**ಇ) ಗುಂಪಿಗೆ ಸೇರದ ಪದ ಆರಿಸಿ ಬರೆಯಿರಿ.**

1. ನಿತ್ಯ, ಪ್ರತಿನಿತ್ಯ, ಅನುದಿನ, ಸದಾ ______________
2. ಅರಿವು, ಇಳೆ, ವಿವೇಕ, ಮತಿ, ______________
3. ಮಸ್ತಕ, ಶಿರ, ತಲೆ, ಕಾಲು ______________
3. ಅರಿ, ವೈರಿ, ಮಳೆ, ಶತೃ ______________
4. ಮಳೆ, ವರ್ಷ, ಬಿಸಿಲು, ವೃಷ್ಟಿ ______________

**ಈ). ಕೊಟ್ಟಿರುವ ವಾಕ್ಯಗಳಲ್ಲಿರುವ ತಪ್ಪನ್ನು ಸರಿಪಡಿಸಿ ಬರೆಯಿರಿ.**

1. ಗಿಳಿಯು ಅಸಿರು ಬಣ್ಣದ ಹಕ್ಕಿ. ________________________________
2. ಅಣ್ಣ ಮಾಡಲು ಹಕ್ಕಿ ಬೇಕು. ________________________________
3. ನಮ್ಮೂರ ಸಾಲೆ ತುಂಬಾ ಶುಂದರವಾಗಿದೆ. ________________________________
4. ಆಕಾಸದಲ್ಲಿ ಅಕ್ಕಿಯು ಆರುತ್ತಿದೆ. ________________________________
5. ಇವತ್ತು ಸಂಕರ ಸಾಲೆಗೆ ಬಂದಿರಲಿಲ್ಲ. ________________________________

**ಮಾರ್ಗದರ್ಶನ:** * ಮೇಲಿನ ಸೂಚನೆಗಳನ್ನು ಅನುಸರಿಸಿ ಮಕ್ಕಳು ತಾವೇ ಪದ್ಯಗಳನ್ನು ಕಲಿಯಲು ಅವಕಾಶ ಮಾಡಿಕೊಡುವುದು.
* ಅಗತ್ಯವಿದ್ದಲ್ಲಿ ಸೂಕ್ತ ಮಾರ್ಗದರ್ಶನ ನೀಡುವುದು.

DIET CHIKMAGALORE